ಎಂ.ಎಸ್. ಶ್ರೀರಾಮ್



**ಶ್ರೇಷ್ಠತೆಯ ಸ್ಥಾವರಗಳನ್ನು ನಿರ್ಮಿಸುವಾಗ ನಾವು ಏನೆಲ್ಲಾ ಮರೆತು ಮೆರೆಯುತ್ತೇವೆ ಎನ್ನುವುದನ್ನು ಚರ್ಚಿಸುವ ಅಜಂತಾ ಅವರ ಕೃತಿ, ಕಾಲ ಕೆಳಗಿನ ಮಣ್ಣಿನ ಸ್ಪರ್ಶಕ್ಕೆ ಒತ್ತಾಯಿಸುತ್ತದೆ.**

# ಶ್ರೇಷ್ಠತೆ, ಪ್ರತಿಭೆ, ಉನ್ನತ ವಿದ್ಯೆ ಮತ್ತು ಜಾತಿ

‘ಭಾರತೀಯ ತಂತ್ರಜ್ಞಾನ ಸಂಸ್ಥೆ’ಗಳಂತಹ (ಐಐಟಿ) ಉನ್ನತ ವಿದ್ಯಾಸಂಸ್ಥೆಗಳಲ್ಲಿನ ಶ್ರೇಷ್ಠತೆಯ ಪರಿಕಲ್ಪನೆಗೂ ಅದನ್ನು ಪರಿಭಾಷೆಗೆ ಒಡ್ಡುವ ಮತ್ತು ಅದರಿಂದಲೇ ಮತ್ತೊಂದು ಜಾತಿಯ ಪ್ರಭೇದ ಹುಟ್ಟಬಹುದಾದ ಸಾಧ್ಯತೆಗಳನ್ನು ಬಿಡಿಸಿಕೊಡುವ ಪುಸ್ತಕ ಅಜಂತಾ ಸುಬ್ರಮಣಿಯನ್ ಬರೆದಿರುವ ‘ದ ಕಾಸ್ಟ್ ಆಫ್ ಮೆರಿಟ್’. ಚೆನ್ನೈನಲ್ಲಿರುವ ‘ಐಐಟಿ ಮದ್ರಾಸ್’ ಕೇಂದ್ರವಾಗಿಟ್ಟುಕೊಂಡು ಉನ್ನತ ಮತ್ತು ‘ಶ್ರೇಷ್ಠತೆ’ಯ ಹಣೆಪಟ್ಟಿ ಹಚ್ಚಿಟ್ಟಿರುವ ತಾಂತ್ರಿಕ ವಿದ್ಯಾಕ್ಷೇತ್ರದ ಬಗ್ಗೆ ಪಾಂಡಿತ್ಯಪೂರ್ಣ ಅಧ್ಯಯನವನ್ನು ಅಜಂತಾ ಕೈಗೊಂಡಿದ್ದಾರೆ. ಪ್ರಾಥಮಿಕ ಶಾಲೆಗಳ ಮೂಲಭೂತ ಚೌಕಟ್ಟು ಕುಸಿಯುತ್ತಿರುವಾಗಲೇ ನಮ್ಮಲ್ಲಿ ಕೆಲವೇ ಕೆಲವು ಉನ್ನತ ವಿದ್ಯೆಯ, ಉನ್ನತ ಗುಣಮಟ್ಟದ ಸಂಸ್ಥೆಗಳು ವಿಶ್ವವಿಖ್ಯಾತವಾಗಿ ನಿಲ್ಲುತ್ತಿರುವ ವಿರೋಧಾಭಾಸವನ್ನು ಗಮನಿಸುತ್ತಲೇ ನಾವು ಈ ಪುಸ್ತಕವನ್ನು ಓದಬೇಕು.

ಈ ರೀತಿಯ ಉನ್ನತ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವಾಗ ಅದಕ್ಕೊಂದು ಶ್ರೇಷ್ಠತೆಯ ‘ಇನ್‌ಸ್ಟಿಟ್ಯೂಟ್ ಆಫ್ ಎಕ್ಸಲೆನ್ಸ್’ ಎನ್ನುವ ಹಣೆಪಟ್ಟಿಯನ್ನು ಕಟ್ಟುತ್ತೇವೆ. ಮಿಕ್ಕ ಸಂಸ್ಥೆಗಳಿಗಿಂತ ಹೆಚ್ಚಿನ ಧನಸಹಾಯವನ್ನೂ ಸವಲತ್ತುಗಳನ್ನೂ ಈ ಸಂಸ್ಥೆಗಳಿಗೆ ಸರ್ಕಾರ ಕೊಡಮಾಡುತ್ತದೆ. ಅನೇಕ ರಿಯಾಯಿತಿಗಳೂ ಅವುಗಳಿಗೆ ದಕ್ಕುತ್ತವೆ. ಈ ಶ್ರೇಷ್ಠತೆಯ ದ್ವೀಪಗಳಲ್ಲಿ ಬಹುತ್ವ ಮತ್ತು ವೈವಿಧ್ಯ ಬರುವುದಕ್ಕೆ ಸಾಧ್ಯವೇ? ಶ್ರೇಷ್ಠತೆಯ ಪರಿಕಲ್ಪನೆಗೂ ಜಾತಿ ವ್ಯವಸ್ಥೆಗೂ ಇರುವ ಸಂಬಂಧಗಳೇನು? ವಿದ್ಯೆ ಮತ್ತು ಅವಕಾಶಗಳು ಬಂದಾಗ ಜಾತಿವ್ಯವಸ್ಥೆ ಗೌಣವಾಗುತ್ತದೆನ್ನುವ ಸಮಾಜ ಶಾಸ್ತ್ರಜ್ಞ ಸತೀಶ್ ದೇಶಪಾಂಡೆ ಅವರ ವಾದವನ್ನು ಉಲ್ಲೇಖಿಸಿ ಅದನ್ನು ತಮ್ಮ ಅಧ್ಯಯನದಲ್ಲಿ ಅಜಂತಾ ಪ್ರಶ್ನಿಸುತ್ತಾರೆ.

ಅಜಂತಾರ ಅಧ್ಯಯನದ ಮೊದಲ ಭಾಗ ‘ಐಐಟಿ ಮದ್ರಾಸ್’ನ ವಿವರಗಳಿಗೆ ಸೀಮಿತವಾಗಿದೆ. ಎರಡನೆಯ ಭಾಗದಲ್ಲಿ ಐಐಟಿ ಎನ್ನುವ ಬ್ರಾಂಡು ಬೆಳೆದ ರೀತಿ ಮತ್ತದರ ವಿಸ್ತಾರವನ್ನು ಚರ್ಚಿಸುತ್ತಾರೆ. ಈ ಚರ್ಚೆಯಲ್ಲಿ, ತಂತ್ರಜ್ಞಾನ ಕೇಂದ್ರಿತವಾದ ಒಂದು ಸಂಸ್ಥೆ ಬೌದ್ಧಿಕ, ಆರ್ಥಿಕ, ವ್ಯಾಪಾರ ಕ್ಷೇತ್ರಗಳಲ್ಲಿ ಸಫಲರಾದವರ ಮೂಲಾಧ್ಯಯನ ಸ್ಥಾನವಾಗಿ ಹೇಗೆ ಪರಿವರ್ತನೆಗೊಳ್ಳುತ್ತದೆನ್ನುವುದನ್ನು ನಾವು ಕಾಣಬಹುದು. ಇದಕ್ಕೆ ಜಾತಿಯ

